ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಮಂಜೂರು ಮಾಡಿರುವ ವಿಶೇಷ ಯೋಜನೆಗಳು

3474 (3897) : ಶ್ರೀ ಶಿವಣ್ಣನವರ್ ಬಸವರಾಜ್ ನೀಲಪ್ಪ (ಹಾವೇರಿ) ಮಾನ್ಯ ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಸರ್ಕಾರವು ಮಂಜೂರು ಮಾಡಿರುವ ವಿಶೇಷ ಯೋಜನೆಗಳಾವುವು?

ಆ) ಮೇಲೆ ತಿಳಿಸಿರುವ ಮುಂದುವರೆದ ಜಿಲ್ಲೆಗಳಿಗೆ ಮಂಜೂರು ಮಾಡಿರುವಂತೆ ಹಿಂದುಳಿದ ಜಿಲ್ಲೆಗಳಾದ ಹಾವೇರಿ, ಕೊಪ್ಪಳ ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ವಿಶೇಷ ಯೋಜನೆಗಳನ್ನು (Special packages) ಸರ್ಕಾರವು ಮಂಜೂರು ಮಡಲಾಗುವುದೇ? ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಆರ್.ಬಿ. ತಿಮ್ಮಾಪುರ (ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಅ) ಬಳ್ಳಾರಿ ಜಿಲ್ಲೆಗೆ ರೂ. 3315.70 ಕೋಟಿ ಅಂದಾಜು ವೆಚ್ಚದಲ್ಲಿ ವಿಶೇಷ ಯೋಜನೆಗಳು ಮಂಜೂರಾಗಿವೆ. ಇದರಲ್ಲಿ ಕುಡುತಿನಿಯಲ್ಲಿ 500 ಮೆಗಾವಾಟ್ಸ್ ಸಾಮರ್ಥ್ಯವುಳ್ಳ ವಿಜಯನಗರ ಥರ್ಮಲ್ ಪವರ್ ಸ್ಟೇಷನ್ ಸ್ಥಾಪನೆ, ಬಳ್ಳಾರಿ ನಗರ ಪ್ರದೇಶಕ್ಕೆ ಕುಡಿಯುವ ನೀರಿನ ಹೆಚ್ಚಳ ಯೋಜನೆ, ಒಳಚರಂಡಿ ವ್ಯವಸ್ಥೆ, ವಿದ್ಯುಚ್ಛಕ್ತಿ ಉಪಕೇಂದ್ರ ಸ್ಥಾಪನೆ, ಬಳ್ಳಾರಿ ನಗರದಲ್ಲಿ 1800 ನಿವೇಶನಗಳ ವಿತರಣೆಗೆ ಅಭಿವೃದ್ಧಿ ಯೋಜನೆ, ಬಳ್ಳಾರಿ ನಗರ ಸುತ್ತ ವಲಯ ರಸ್ತೆ ನಿರ್ಮಾಣ, ಸಣ್ಣ ನೀರಾವರಿ ಯೋಜನೆಗಳು, 233 ಗ್ರಾಮೀಣ ವಾಸಸ್ಥಳಗಳಿಗೆ ಕುಡಿಯುವ ನೀರಿನ ಸರಬರಾಜು ಉನ್ನತೀಕರಣ, ಪ್ರಾಥಮಿಕ ಆರೋಗ್ಯ ಮತ್ತು ಪ್ರಾಥಮಿಕ ಶಿಕ್ಷಣ ಕ್ಷೇತ್ರಗಳಲ್ಲಿ ಸುಧಾರಣೆಗಳು, ಇತ್ಯಾದಿ ಸೇರಿವೆ.

ಮಂಡ್ಯ ಜಿಲ್ಲಾ ಪ್ಯಾಕೇಜ್ ಮೊದಲನೇ ಹಂತದಲ್ಲಿ ಸಮಗ್ರ ರಸ್ತೆಗಳ ಅಭಿವೃದ್ಧಿಗೆ ರೂ. 100 ಕೋಟಿಗಳ ಕಾರ್ಯಕ್ರಮ ಮಂಜೂರಾಗಿದೆ.

ಆ) ಕೊಪ್ಪಳ ಜಿಲ್ಲೆಗೆ ರೂ. 100 ಕೋಟಿ ಅಂದಾಜು ವೆಚ್ಚದಲ್ಲಿ ವಿಶೇಷ ಕಾರ್ಯಕ್ರಮಗಳ ಮಂಜೂರಾತಿ ಪರಿಶೀಲನೆಯಲ್ಲಿದೆ.

ಚಾಮರಾಜನಗರ ಮತ್ತು ಹಾವೇರಿ ಜಿಲ್ಲೆಗಳಿಗೆ ಸಧ್ಯಕ್ಕೆ ಯಾವ ಪ್ರಸ್ತಾವನೆಯು ಇಲ್ಲ.

ರಾಜ್ಯದಲ್ಲಿ ಹೊಸದಾಗಿ ಶಿಕ್ಷಕರ ತರಬೇತಿ ಕೇಂದ್ರಗಳು

3497 (4095) : ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹೊಸದಾಗಿ ಶಿಕ್ಷಕರ ತರಬೇತಿ ಕೇಂದ್ರಗಳನ್ನು ಮಂಜೂರು ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಹಾಗೂ ಮಂಜೂರಾತಿಯನ್ನು ಕೋರಿ ಯಾವ ಯಾವ ಜಿಲ್ಲೆಗಳಿಂದ ಎಷ್ಟು ಅರ್ಜಿಗಳು ಸರ್ಕಾರಕ್ಕೆ ಬಂದಿರುವೆ

ಆ) ರಾಯಚೂರು ಜಿಲ್ಲೆಯಿಂದ ಬಂದಿರುವ ಅರ್ಜಿಗಳು ಎಷ್ಟು; ಅವು ಯಾವ ಸಂಸ್ಥೆಗೆ ಸೇರಿವೆ ಹಾಗೂ ಹೊಸ ಶಿಕ್ಷಕರ ತರಬೇತಿ ಕೆಂದ್ರಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ಪ್ರೋ .ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ:ಇಡಿ100 ಪಿಟಿಐ 2001, ದಿನಾಂಕ: 27.07.2001 ರಲ್ಲಿ ವಿಧಿಸಲಾಗಿದ್ದ ಷರತ್ತುಗಳನ್ನು ಅನುಸರಿಸಿ ಹೊಸದಾಗಿ ವಿಜ್ಞಾನ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು

(ಡಿ.ಇಡಿ) ಪ್ರಾರಂಭಿಸಲು ಆಕ್ಷೇಪಣಾ ರಹಿತ ಪತ್ರ ನೀಡಲು ಕ್ರಮ ಜರುಗಿಸಲಾಗಿದೆ. ಮಂಜೂರಾತಿ ಕೋರಿ ವಿವಿಧ ಜಿಲ್ಲೆಗಳಿಂದ ಸ್ವೀಕೃತವಾದ ಅರ್ಜಿಗಳ ವಿವರ ಈ ಕೆಳಕಂಡಂತೆ ಇವೆ:-

ಬಾಗಲಕೋಟೆ –15; ಬೆಂಗಳೂರು
ಗ್ರಾಮಾಂತರ–36; ಬೆಂಗಳೂರು ನಗರ – 86
ಬೆಳಗಾವಿ–36; ಬಳ್ಳಾರಿ–20; ಬೀದರ್–26
ಬಿಜಾಪುರ–24; ಚಾಮರಾಜನಗರ–26;
ಚಿಕ್ಕಮಗಳೂರು–26; ಚಿತ್ರದುರ್ಗ–10
ಕೊಡಗು–06; ದಕ್ಷಿಣ ಕನ್ನಡ–03;
ದಾವಣಗೆರೆ–34; ಧರವಾಡ–07; ಗದಗ್–24;
ಗುಲ್ಬರ್ಗಾ–26; ಹಾಸನ–18; ಹಾವೇರಿ–27;
ಕೋಲಾರ–32; ಕೊಪ್ಪಳ–16; ಮಂಡ್ಯ–17;
ಮೈಸೂರು–19; ರಾಯಚೂರು–15;
ಶಿವಮೊಗ್ಗ–20; ತುಮಕೂರು–19;
ಉಡುಪಿ–10; ಉತ್ತ ಕನ್ನಡ–12

ಆ) ರಾಯಚೂರು ಜಿಲ್ಲೆಯಿಂದ ಸ್ವೀಕೃತ ಅರ್ಜಿಗಳ ಸಂಖ್ಯೆ:15. ಈ 15 ಅರ್ಜಿದಾರ ಸಂಸ್ಥೆಗಳ ಹೆಸರುಗಳನ್ನು ಅನುಬಂಧದಲ್ಲಿ ನೀಡಲಾಗಿದೆ. (ಅ) ರಲ್ಲಿ ಉತ್ತರಿಸಿರುವಂತೆ, ಆಕ್ಷೇಪಣಾ ರಹಿತ ಪತ್ರಗಳನ್ನು ನೀಡಲು ಕ್ರಮ ಜರುಗಿಸಲಾಗಿದೆ.

ಅನುಬಂಧ

ರಾಯಚೂರು ಜಿಲ್ಲೆಯಿಂದ ಸಲ್ಲಿಸಲ್ಪಟ್ಟ ಸ್ವೀಕೃತ ಅರ್ಜಿಗಳಿಗೆ ಸಂಬಂಧಿಸಿದ ವಿವಿಧ ಸಂಸ್ಥೆಗಳ ಪಟ್ಟಿ

ಕ್ರಮ ಸಂಖ್ಯೆ	ಸಂಸ್ಥೆಯ ಹೆಸರು	ಜಿಲ್ಲೆ
01	ಅಕ್ಕರಕಿ ರಂಗಮ್ಮ ರಂಗಪ್ಪ ಎಜುಕೇಷನ್ ಅಂಡ್ ವೆಲ್‌ಫೇರ್ ಟ್ರಸ್ಟ್, ದೇವದುರ್ಗ, ರಾಯಚೂರು	ರಾಯಚೂರು
02	ನವೋದಯ ಎಜುಕೇಷನಲ್ ಮಂತ್ರಾಲಯಂ ರೋಡ್ ಟ್ರಸ್ಟ್, ರಾಯಚೂರು	ರಾಯಚೂರು
03.	ಶ್ರೀ ಮೈಲಾರಲಿಂಗೇಶ್ವರ ವಿದ್ಯಾವರ್ಧಕ ಸಂಸ್ಥೆ ದೇವರಗುಂಡಗುರ್ತಿಗ್ರಾಮ ದೇವದುರ್ಗ, ರಾಯಚೂರು	ರಾಯಚೂರು
04	ವಿವೇಕಾನಂದ ರೂರಲ್ ಎಜುಕೇಷನ್ ಟ್ರಸ್ಟ್, ಅಫ್ಜಲ್‌ಪುರ್, ಗುಲ್ಬರ್ಗಾ ಜಿಲ್ಲೆ	ರಾಯಚೂರು
05	ತಕ್ಷಶಿಲಾ ಎಜುಕೆಷನ್ ಫಾಂಡೇಷನ್, ರಾಯಚೂರು	ರಾಯಚೂರು
06	ಶ್ರೀ ಕನಕದಾಸ ಸೇವಾ ಸಂಘ, ಸುಕಾಲ ಪೇಟ, ಸಿಂಧನೂರ್, ರಾಯಚೂರು	ರಾಯಚೂರು

1	2	3
07	ಶ್ರೀ ಸುಗುರೇಶ್ವರ ಸೇವಾ ಸಮಿತಿ ಟ್ರಸ್ಟ್, ಸುಕ್ಷೇತ್ರ ದೇವಸುಗೂರ್, ರಾಯಚೂರು	ರಾಯಚೂರು
08	ಇಸ್ಲಾಮಿಯಾ ಎಜುಕೇಷನ್ ಟ್ರಸ್ಟ್, ಪವನ್‌ದರ್ಗಾ ರೋಡ್ ರೋಸಾ, ಗುಲ್ಬರ್ಗಾ	ರಾಯಚೂರು
09	ಶ್ರೀಶೈಲ ಮಲ್ಲಿಕಾರ್ಜುನ ವಿದ್ಯಾ ಸಂಸ್ಥೆ, ಈಚನಾಳ,	ರಾಯಚೂರು
10	ಜವಹರ್ ಎಜುಕೇಷನ್ ಸೊಸೈಟಿ, ಯಾದಗೀರ್, ಗುಲ್ಬರ್ಗಾ	ರಾಯಚೂರು
11	ಕರ್ನಾಟಕ ಪೀಪಲ್ಸ್ ಎಜುಕೇಷನ್ ಸೊಸೈಟಿ, ದರ್ಗಾರೋಡ್	ರಾಯಚೂರು
12	ಶ್ರೀ ಉದಕನೂರುತಾತಾ ಎಜುಕೇಷನ್ ಟ್ರಸ್ಟ್, ಲಿಂಗಸುಗೂರ್, ರಾಯಚೂರು	ರಾಯಚೂರು
13.	ಜಗದ್ಗುರು ಮರುಳಾರಾಧ್ಯ ವಿದ್ಯಾ ಸಂಸ್ಥೆ, ಕಂಬಾಲಿಹಳ,	ರಾಯಚೂರು
14.	ವಳಬಳ್ಳಾರಿ ಚೆನ್ನಬಸವೇಶ್ವರ ಎಜುಕೇಷನ್ ಸೊಸೈಟಿ, ಲಿಂಗಸೂಗೂರು, ರಾಯಚೂರು	ರಾಯಚೂರು
15.	ಡಾ: ಬಾಬಾಸಾಹೇಬ್ ಅಂಬೇಡ್ಕರ್ ವಿದ್ಯಾವರ್ಧಕ ಸಂಘ ಸುರಪುರ ಗುಲ್ಬರ್ಗಾ ಜಿಲ್ಲೆ	ರಾಯಚೂರು

ಕೇಂದ್ರ ಸರ್ಕಾರದ ಹಣವನ್ನು ಪೂರ್ತಿ ಬಳಸದಿರುವುದು

3564 (3514) : ಶ್ರೀ ಲಕ್ಷ್ಮಿನಾರಾಯಣ ಎಂಡಿ. (ಅಣ್ಣಯ್ಯ) (ತುರುವೇಕೆರೆ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೇಂದ್ರ ಸರ್ಕಾರ ನೀಡಿರುವ ಹಣ ಎಷ್ಟು? (ಕಳೆದ ಮೂರು ವರ್ಷಗಳ ವಿವರವನ್ನು ಯೋಜನೆವಾರು ನೀಡುವುದು)

ಆ) ಕೇಂದ್ರದ ಹಣದಿಂದ ರಾಜ್ಯದಲ್ಲಿ ಯಾವ ಕಾರ್ಯಕ್ರಮಗಳಡಿ ಎಷ್ಟು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ? (ಕಾಮಗಾರಿವಾರು ಹಣದ ವಿವರವನ್ನು ನೀಡುವುದು)

ಇ) ಕೇಂದ್ರ ಸರ್ಕಾರ ನೀಡಿರುವ ಹಣದಲ್ಲಿ ರಾಜ್ಯ ಸರ್ಕಾರ ಈವರೆಗೂ ವೆಚ್ಚ ಮಾಡಿರುವ ಹಣ ಎಷ್ಟು? (ಯೋಜನೆವಾರು ಮಾಹಿತಿ ನೀಡುವುದು)

ಈ) ಕೇಂದ್ರ ಸರ್ಕಾರದ ಹಣವನ್ನು ಪೂರ್ತಿಯಾಗಿ ಬಳಸಿಕೊಳ್ಳಲು ಕಾರಣಗಳೇನು?

ಶ್ರೀ ಎಂ. ವೈ ಗೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಈ ಕುರಿತು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಆ) ಕೇಂದ್ರಸರ್ಕಾರದ ಹಣದಿಂದ ರಾಜ್ಯದಲ್ಲಿ ವಿವಿಧ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ 5,36,795 ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. 5,36,795 ಕಾಮಗಾರಿಗಳು ಇರುವುದರಿಂದ ಕಾಮಗಾರಿ ವಾರು ವಿವರವನ್ನು ಕೊಡಲು ಸಾಧ್ಯವಾಗುವುದಿಲ್ಲ. ಯೋಜನೆವಾರು ವೆಚ್ಚದ ವಿವರವನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಇ) ಈ ಕುರಿತು ವಿವಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ.

ಈ) ಕೇಂದ್ರಸರ್ಕಾರದ ಹಣದಲ್ಲಿ ಜೂನ್ 2003ರ ಅಂತ್ಯದವರೆಗೆ ಶೇ. 98ರಷ್ಟು ಹಣ ಖರ್ಚು ಮಾಡಲಾಗಿದ್ದು, ಆದಾಗ್ಯೂ ಕಾರಣಗಳನ್ನು ಅನುಬಂಧ – 2ರಲ್ಲಿ ಒದಗಿಸಲಾಗಿದೆ.